**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡ ಅಧಿಕಾರಿಗಳ ನ್ಯಾಯಾಲಯ, ಸುರಪುರ.**

| | |
|---|---|
| ಒ.ಎಸ್. ನಂ | 326/2016 |
| ಪಿ.ಡಬ್ಲ್ಯು | 01 |
| ದಿನಾಂಕ | 05.10.2023 |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಎಮ್. ಎಚ್ ವಕೀಲರಿಂದ**

ಪ್ರಸ್ತುತ ದಾವೆಯನ್ನು ನನ್ನ ತಾಯಿ ಸಲ್ಲಿಸಿದ್ದಾರೆ. ನನ್ನ ತಾಯಿ ದಾವೆ ಸಲ್ಲಿಸುವ ಕಾಲಕ್ಕೆ ನಾನು ಇದ್ದೆ. ಸರ್ವೇ ಮಾಡಿಸಲು ಬಂದಾಗ ಪ್ರತಿವಾದಿಯ ಹೆಸರು ಮತ್ತು ಮಾಹಿತಿ ಗೊತ್ತಾಯಿತು. ಪ್ರತಿವಾದಿಯವರು ಅಲ್ ಅಮೀನ ಯುವಕ ಸೇವಾ ಸಂಘದ ಅಧ್ಯಕ್ಷರಿದ್ದಾರೆ. ನಾವು ದಾವಾ ಸಲ್ಲಿಸುವ ಕಾಲಕ್ಕೆ ಅಲ್ ಅಮೀನ ಯುವಕ ಸೇವಾ ಸಂಘದ ಅಧ್ಯಕ್ಷರ ಮೇಲೆ ದಾವಾ ಸಲ್ಲಿಸಬೇಕೆಂದು ಮಾಹಿತಿಯನ್ನು ನೀಡಿದ್ದೇನೆ. ನನ್ನ ದಾವೆಯಲ್ಲಿ ಪ್ರತಿವಾದಿಯವರು ಅಲ್ ಅಮೀನ ಯುವಕ ಸೇವಾ ಸಂಘದ ಅಧ್ಯಕ್ಷರು ಇದ್ದಾರೆ ಎಂದರೆ ಬರೆದಿದ್ದು ನಾನು ನೋಡಿದ್ದೇನೆ. ದಾವಾ ಸಲ್ಲಿಸುವ 15 ದಿನಗಳ ಮುಂಚೆ ಸರ್ವೇ ಮಾಡಲು ತಾಲುಕು ಸರ್ವೇಯವರ ಜೊತೆ ಪ್ರತಿವಾದಿಯು ಬಂದಿದ್ದರು. ನಮಗೆ ನೋಟಿಸ್ ನೀಡದೆ ಸರ್ವೇ ಮಾಡಲು ಬಂದಿದ್ದರಿಂದ ನಾವು ಸರ್ವೇ ಮಾಡಲು ಬಿಡಲಿಲ್ಲ ಅದಕ್ಕಾಗಿ ನಾವು ಸರ್ವೇ ಮಾಡಬಾರದು ಮತ್ತು ನಮಗೆ ತಕರಾರು ಮಾಡಬಾರದೆಂದು ದಾವೆಯನ್ನು ಹುಡಿದ್ದೇವೆ. ನನ್ನ ತಾಯಿ ಜೀವಂತವಾಗಿದ್ದಾರೆ. ನನ್ನ ತಾಯಿ ಮನೆಯಲ್ಲಿ ಇರುತ್ತಾರೆ. ನನ್ನ ತಾಯಿ ನ್ಯಾಯಲಯಕ್ಕೆ ಬಂದರೆ ಸತ್ಯಾಂಶ ಹೊರ ಬರುತ್ತದೆ ಎಂದು ಅವರಿಂದ ಅಧಿಕಾರ ಪತ್ರವನ್ನು ಪಡೆದು ನಾನು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಕಿವಿ ಕೇಳಸಲು ಮತ್ತು ಆರೋಗ್ಯ ಸ್ಥಿರವಾಗಿಲ್ಲ ಎನ್ನುವುದಕ್ಕೆ ನಾವು ನ್ಯಾಯಲಯಕ್ಕೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಆದರೆ ಮನೆಯಲ್ಲಿ ಇದೆ ಎಂದು ನುಡಿಯುತ್ತಾರೆ. ನನ್ನ ತಾಯಿ ಆರೋಗ್ಯವಾಗಿದ್ದರೆ ಎಂದರೆ ಸರಿಯಲ್ಲ. ಸರ್ವೇ ನಂ.31 ಮೂಲತಃ ನನ್ನ ತಾತನಾದ ಸೀನಪ್ಪ ತಂದೆ ಬಲವಂತಪ್ಪ ಹುದ್ದಾರ ಇವರ ಹೆಸರಿನಲ್ಲಿ ಇತ್ತು. ಒಟ್ಟು 9 ಎಕರೆ 26 ಗುಂಟೆ ಜಮೀನು ಇತ್ತು. ನನ್ನ ತಾತ ಸೀನಪ್ಪ ಇವರು ತೀರಿಕೊಂಡ ಮೇಲೆ ನನ್ನ ತಾತನ ಭೀಮಣ್ಣ ತಂದೆ ಬಲವಂತಪ್ಪ ಹುದ್ದಾರ ಇವರ ಹೆಸರಿನಲ್ಲಿ ಖಾತ ವರ್ಗಾವಣೆಯಾಗಿತ್ತು. ತದನಂತರ ಈ ಮೇಲ್ಕಂಡ ಆಸ್ತಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನವರ ಹೆಸರಿನಲ್ಲಿ ಖಾತ ವರ್ಗಾವಣೆಯಾಗಿತ್ತು. 9 ಎಕರೆ 26 ಗುಂಟೆಯಲ್ಲಿ ನನ್ನ ತಾತನಾದ ಭೀಮಣ್ಣ ತಂದೆ ಬಲವಂತಪ್ಪ ಇವರು 2 ಎಕರೆ 30 ಗುಂಟೆ ಜಮೀನನ್ನು

ಮಹಮ್ಮದ್ ಖಲೀಫ್ ತಂದೆ ಕಾಸೀಮ್ ಅಲಿ ಇವರಿಗೆ ಮಾರಾಟ ಮಾಡಿದ್ದಾರೆ. ನಂತರ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನವರು 3 ಎಕರೆ 33 ಗುಂಟೆಯನ್ನು ಜಮೀನು ಸಿದ್ದಣ್ಣ ತಂದೆ ಚಿದಾನಂದ ಇವರಿಗೆ ಮಾರಾಟ ಮಾಡಿದ್ದಾರೆ. ಇದಾದ ನಂತರ ನಾವು ಉಳಿದ ಜಮೀನಿನಲ್ಲಿ ಯಾವುದೇ ಮಾರಾಟ ಮಾಡಿರುವುದಿಲ್ಲ. ಸಿದ್ದಣ್ಣ ತಂದೆ ಚಿದಾನಂದ 3 ಎಕರೆ 33 ಗುಂಟೆ ಜಮೀನು 1 ಎಕರೆ ಟಿ ಎಂ ಸಿ ಸುರಪುರ ಇವರಿಗೆ ಮತ್ತು 2 ಎಕರೆ 33 ಗುಂಟೆ ಪರಮಣ್ಣ ತಂದೆ ಹಣಮಂತ್ರಾಯ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. 2007-08 ರಲ್ಲಿ ಸರ್ವೆ ನಂ.31 ನ್ನು ತಹಶಿಲ್ದಾರ ಸುರಪುರ ಇವರು ನಮೂನೆ-10 ಅನ್ನು ತಯಾರಿಸಿ 5 ವಿಭಾಗಗಳಾಗಿ ವಿಂಗಡಿಸಿ ಸರ್ವೆ ನಂ.31/1/ಎ, 31/1 ಬಿ, 31/1/ಸಿ, 31/1/ಡಿ, ಮತ್ತು 31/2 ಎಂದರೆ ಸರಿ. ನಾನು ನನ್ನ ತಾತನಾದ ಭೀಮಣ್ಣ ತಂದೆ ಬಲವಂತಪ್ಪ ಹುದ್ದಾರವರು ಮಹಮ್ಮದ್ ಖಲೀಫ್ ತಂದೆ ಕಾಸೀಮ್ ಅಲಿ ಇವರಿಗೆ ಮಾರಾಟ ಮಾಡಿದ ಖರಿದಿ ಪತ್ರವನ್ನು ನಾನು ನೋಡಿಲ್ಲ. ನನ್ನ ತಾತ ಮಾರಾಟ ಮಾಡಿದ 2 ಎಕರೆ 30 ಗುಂಟೆ ಜಮೀನನ್ನು ನಾನು ನೋಡಿದ್ದೇನೆ. ನನ್ನ ತಾತ ಮಾರಾಟ ಮಾಡಿದ ಜಮೀನಿನ ಚಕ್ಕು ಬಂದಿಯನ್ನು ಹೇಳಲು ಆಗುವುದಿಲ್ಲ. ಕಲೀಲ್ ಇವರು ಖರೀದಿ ಮಾಡಿದ ಜಮೀನಿನಲ್ಲಿ 2 ಎಕರೆ 30 ಗುಂಟೆಯಲ್ಲಿ 1 ಎಕರೆ 30 ಗುಂಟೆ ಎನ್ ಎ ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎನ್ ಎ ಆದ ಜಾಗದಲ್ಲಿ ಕಲೀಲ್ ಎನ್ನುವವರು ಪ್ಲಾಟುಗಳು ಮಾಡಿ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಒಟ್ಟು 9 ಎಕರೆ 26 ಗುಂಟೆಯಲ್ಲಿ ದಕ್ಷಿಣ ದಿಕ್ಕಿಗೆ 2 ಎಕರೆ 30 ಗುಂಟೆ ಜಮೀನನ್ನು ಕಲೀಲ್ ಇವರಿಗೆ ಮಾರಾಟ ಮಾಡಿದ್ದಾರೆ. ನನ್ನ ತಂದೆ ಮತ್ತು ಚಿಕ್ಕಪ್ಪ ಸಿದ್ದಣ್ಣ ತಂದೆ ಚಿದಾನಂದ ಸಿರವಾಳ ಇವರಿಗೆ ಮಾರಾಟ ಮಾಡಿದ ಆಸ್ತಿಯನ್ನು ನಾನು ನೋಡಿದ್ದೇನೆ. ನನ್ನ ತಂದೆ ಮತ್ತು ಚಿಕ್ಕಪ್ಪ ಸಿದ್ದಣ್ಣ ತಂದೆ ಚಿದಾನಂದ ಸಿರವಾಳ ಇವರಿಗೆ ಮಾರಾಟ ಮಾಡಿದ ಆಸ್ತಿ ಪೂರ್ವ ಮತ್ತು ಪಶ್ಚಿಮದ ಮಧ್ಯದಲ್ಲಿ ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ತಂದೆ ಮಾರಾಟ ಮಾಡಿದ ಖರೀದಿ ಪತ್ರವನ್ನು ನೋಡಿದ್ದೇನೆ. ಪೂರ್ವಕ್ಕೆ ನಮ್ಮ ಉಳಿದ ಹೊಲ, ಪಶ್ಚಿಮಕ್ಕೆ ನಮ್ಮ ಉಳಿದ ಹೊಲ, ದಕ್ಷಿಣಕ್ಕೆ ಸರ್ವೆ ನಂ.31/2 ಇದೆ, ಉತ್ತರಕ್ಕೆ ಸುರಪುರದಿಂದ ಗುಲಬುರ್ಗಾಕ್ಕೆ ಹೋಗುವ ರಸ್ತೆ ಇದೆ. ಸಿದ್ದಣ್ಣ ತಂದೆ ಚಿದಾನಂದ ಸಿರವಾಳ ಇವರಿಗೆ ಮಾರಾಟ ಮಾಡಿದ ಖರೀದಿ ಪತ್ರವನ್ನು ನ್ಯಾಯಲಯಕ್ಕೆ ಹಾಜರುಪಡಿಸಿದ್ದೇನೆ. 2007-08 ರಲ್ಲಿ ಆಗಿರುವ ನಮೂನೆ-10 ರ ಜೊತೆ ನಕಾಶೆಯನ್ನು ಹಾಜುರಪಡಿಸಿರುವುದಿಲ್ಲ. ಮದನ್ ಷಾ ವಲಿ ದರ್ಗಾ ನಮ್ಮ ಜಮೀನಿಗೆ ಹತ್ತಿಕೊಂಡಿದೆ. ದಾವಾ ಆಸ್ತಿಯ ಉತ್ತರಕ್ಕೆ ಇದೆ. ಸಿದ್ದಣ್ಣ ತಂದೆ ಚಿದಾನಂದ ಸಿರವಾಳ ಇವರು ಪುರಸಬೆ ಸುರಪುರ ಇವರಿಗೆ 1 ಎಕರೆ ಮಾರಾಟ ಮಾಡಿದ ಚಕ್ಕು ಬಂದಿ ಹೇಳಲು ಬರುವುದಿಲ್ಲ. ಪರಮಣ್ಣ ತಂದೆ ಹಣಮಂತ್ರಾಯ ಇವರಿಗೆ ಮಾರಾಟ ಮಾಡಿದ ಜಮೀನು

ಯಾವ ದಿಕ್ಕಿಗೆ ಪುರಸಬೆಗೆ ಆಸ್ತಿಯ ಚಕ್ಕು ಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿ 3 ಎಕರೆ 4 ಗುಂಟೆ ಉಳಿದಿದೆ. ಒಟ್ಟು 9 ಎಕರೆ 26 ಗುಂಟೆ ಜಮೀನು ಸರ್ವೆ ಮಾಡಿ ದಾವಾ ಆಸ್ತಿಯ ಬೊಂಡರಿ ಪತ್ತೆ ಮಾಡಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ
ದರ್ಜೆ ನ್ಯಾಯಿಕ ದಂಡ ಅಧಿಕಾರಿಗಳ
ನ್ಯಾಯಾಲಯ, ಸುರಪುರ.